ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಲಬುರಗಿ**

ಸಂ: ಕಂ/ಸಿಬ್ಬಂದಿ-1/ಗ್ರಾಲೇ-ನೇಮಕಾತಿ/17/2015-16 ದಿನಾಂಕ 29-08-2015

**ಪ್ರಕಟಣೆ**

ವಿಷಯ :- ಕಲಬುರಗಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳ ನೇರ ನೇಮಕಾತಿ ಪರಿಶೀಲನೆ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ/04/ಬಿಎಸ್‌ಸಿ/2011 ದಿನಾಂಕ 25-02-2011.
2)ಈ ಕಾರ್ಯಾಲಯದ ಅಧಿಸೂಚನೆ ಸಮ ಸಂಖ್ಯೆ ದಿನಾಂಕ 27-06-2015

ಕಲಬುರಗಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಉಲ್ಲೇಖ -2 ರ ಆದೇಶದ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು.ಆನ್ ಲೈನ್ ಮೂಲಕ ಸ್ವೀಕೃತವಾದ ಅರ್ಜಿಗಳನ್ನು ಪರೀಶೀಲಿಸಿ ಅರ್ಹ ಅಭ್ಯರ್ಥಿಗಳ ನೇಮಕಾತಿ ಕುರಿತು ತಯ್ಯಾರಿಸಲಾದ 1 :5 ಅಭ್ಯರ್ಥಿಗಳ ಜೇಷ್ಠತಾ ಹಾಗೂ ರೋಷ್ಟರ ಆಧಾರ ಮೇಲೆ ಪರೀಶೀಲನಾ ಪಟ್ಟಿ ಜಿಲ್ಲಾಧಿಕಾರಿಗಳ ಕಲಬುರಗಿ ಇವರ ಕಾರ್ಯಾಲಯದಲ್ಲಿ ಹಾಗೂ ವೆಬ್ ಸೈಟ್ ನಲ್ಲಿ kalaburagi-va.kar.nic.in ರಲ್ಲಿ ಪ್ರಚುರ ಪಡಿಸಲಾಗಿದೆ. ಸದರಿ ಪರೀಶಿಲನಾ ಪಟ್ಟಿ ಆಕ್ಷೇಪಣಾ ಮತ್ತು ತಕರಾರುಗಳನ್ನು ಸಲ್ಲಿಸಲು ದಿನಾಂಕ 10-09-2015 ರವರೆಗೆ ಅವಧಿ ನಿಗಧಿಪಡಿಸಲಾಗಿದೆ. ಆಕ್ಷೇಪಣಾ ಮತ್ತು ತಕರಾರುಗಳನ್ನು ಲಿಖಿತ ರೂಪದಲ್ಲಿ ನೇರವಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಿದೆ. ಅವಧಿ ಮುಗಿದ ನಂತರ ಆಕ್ಷೇಪಣಾ ಮತ್ತು ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ. ಆಕ್ಷೇಪಣೇಗಳನ್ನು ನಿಯಮಾನುಸಾರ ಪರಿಶೀಲಿಸಿದ ನಂತರ 1.:5 ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅಂತರ ಜಾಲದಲ್ಲಿ ಪ್ರಕಟಿಸಲಾಗುವುದು. ಅರ್ಹರಿಗೆ ಈಗಾಗಲೇ ನಿಗದಿ ಪಡಿಸಿದಂತೆ 19-09-2015 ರಂದು ದಾಖಲಾತಿ ಪರಿಶೀಲನೆ ಮಾಡುವ ಕುರಿತು ಮಾಹಿತಿ ನೀಡಲಾಗುವುದು.

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಗ್ರಾಮಲೆಕ್ಕಿಗರ ನೇಮಕಾತಿ ಪ್ರಾಧಿಕಾರ
ಕಲಬುರಗಿ ಜಿಲ್ಲೆ ಕಲಬುರಗಿ

**ಪ್ರತಿಯನ್ನು:-**

1) ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಸೇವೆಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
3) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಉಪನಿರ್ದೇಶಕರು ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ ಗುಲಬರ್ಗಾ ಇವರಿಗೆ ನೀಡುತ್ತಾ ಪ್ರಕಟಣೆಯನ್ನು ಸಂಕ್ಷಿಪ್ತವಾಗಿ ರಾಜ್ಯಾದ್ಯಂತ ಪ್ರಮುಖ ದಿನ ಪತ್ರಿಕೆಗಳಲ್ಲಿ ಸರ್ಕಾರಕ್ಕೆ ಯಾವುದೇ ಹೊರೆ ಬೀಳದಂತೆ ಪ್ರಕಟಿಸಲು ಕೋರಿದೆ. ನಂತರ ಅವುಗಳ ಪ್ರತಿಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಿದೆ.
5) ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.
6) ಹೆಚ್ಚಿನ ಪ್ರತಿಗಳು